## ಜಾತಕ ಕಥೆಗಳು : ೫

# ನರಕವನ್ನು ಧಿಕ್ಕರಿಸಿದ ವ್ಯಾಪಾರಿಯ ದಾನಗುಣ

ಸ್ವಾಮಿ ವೀರೇಶಾನಂದ



ಶ್ರದ್ಧಾಳುವಾದವರು ಎಂಥ ಕಷ್ಟದ ಪರಿಸ್ಥಿತಿಯಲ್ಲಿಯೂ ದಾನಮಾಡುವ ತಮ್ಮ ಸ್ವಭಾವವನ್ನು ಬಿಟ್ಟುಕೊಡುವುದಿಲ್ಲ. ಇದಕ್ಕೆ ನಿದರ್ಶನ ಈ ಕಥೆ. ಇದು ನಡೆದಿದ್ದು ನಮ್ಮ ಬುದ್ಧ ಭಗವಾನನು ಇನ್ನೂ ಬೋಧಿಸತ್ವನಾಗಿದ್ದ ಸಮಯದಲ್ಲಿ. ಅವನು ವ್ಯಾಪಾರಿಗಳ ಒಕ್ಕೂಟದ ಅಧ್ಯಕ್ಷನಾಗಿದ್ದನು. ಅವನ ಅದೃಷ್ಟಕ್ಕೆ ಬಹಳಷ್ಟು ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿದ್ದನು. ಆಸ್ತಿಪಾಸ್ತಿಗಳನ್ನು ಚೆನ್ನಾಗಿಯೇ ಮಾಡಿಕೊಂಡಿದ್ದನು. ವ್ಯವಹಾರದಲ್ಲಿ ದಕ್ಷನಾಗಿದ್ದುದೇ ಅಲ್ಲದೆ ಪ್ರಾಮಾಣಿಕನೂ ಆಗಿದ್ದನು. ಇದರಿಂದಾಗಿ ಜನರು ಅವನನ್ನು ಬಹಳಷ್ಟು ಗೌರವಿಸುತ್ತಿದ್ದರು. ಅವನು ಬಹಳ ಪ್ರತಿಷ್ಠಿತ ಕುಟುಂಬದಲ್ಲಿ ಹುಟ್ಟಿದ್ದನು. ಹೀಗಾಗಿ ಎಲ್ಲ ಬಗೆಯ ವಿದ್ಯೆಗಳನ್ನೂ ಕಲಿತಿದ್ದನು; ಲಲಿತ ಕಲೆಗಳನ್ನು ಮೈಗೂಡಿಸಿಕೊಂಡಿದ್ದನು. ಇವನ ಈ ಉದಾತ್ತ ಗುಣಗಳನ್ನು ನೋಡಿ, ಅಲ್ಲಿನ ರಾಜನು ಅವನನ್ನು ಮರ್ಯಾದೆಯಿಂದ ಕಾಣುತ್ತಿದ್ದನು. ಅವನ ಒಂದು ವಿಶಿಷ್ಟ ಗುಣವೆಂದರೆ ದಾನಶೀಲತೆ. ಇದರಿಂದ ಜನರಲ್ಲಿ ಮಾನ್ಯತೆಯನ್ನು ಗಳಿಸಿಕೊಂಡಿದ್ದನು.

ತಾಪಸಿಗಳು ಅವನನ್ನು ಪ್ರೀತಿಸುತ್ತಿದ್ದರು; ಅವನ ಹೆಸರನ್ನು ಎಲ್ಲೆಡೆ ಹೇಳುತ್ತ, ಹಾಡಿ ಹೊಗಳುತ್ತಿದ್ದರು. ದಾನಶೀಲನೆಂದು ಅವನ ಪ್ರಭಾವವು ಎಲ್ಲೆಡೆ ಹರಡಿತ್ತು. ಬೋಧಿಸತ್ವನಿಗೆ ಬಡ ಜನರ, ತಾಪಸಿಗಳ ಸಂಕಟವನ್ನು ಕಂಡರೆ ತಡೆಯಲಾಗುತ್ತಿರಲಿಲ್ಲ. ಯಾರಿಗೂ ಅವನು ಇಲ್ಲ ಎಂದು ಹೇಳಿದವನೇ ಅಲ್ಲ.

ಒಂದು ದಿನ ಭೋಜನ ಸಮಯವಾಗಿತ್ತು. ಅವನು ಸ್ನಾನ ಮಾಡಿ, ಊಟಕ್ಕೆ ಸಿದ್ಧನಾಗಿದ್ದನು. ಹಲವಾರು ರುಚಿಕಟ್ಟಾದ ಖಾದ್ಯಗಳು ಸಿದ್ಧವಾಗಿದ್ದವು. ಪರಿಣಿತರಾದ ಬಾಣಸಿಗರು ಅವುಗಳನ್ನು ನಿಷ್ಠೆಯಿಂದ ತಯಾರಿಸಿದ್ದರು. ಅದೇ ಸಮಯದಲ್ಲಿ ಪ್ರತ್ಯೇಕಬುದ್ಧನೆಂಬ ದಿವ್ಯಾತ್ಮನು ಒಬ್ಬ ಸಾಧಾರಣ

ತಾಪಸಿಯ ವೇಷವನ್ನು ಧರಿಸಿಕೊಂಡು, ಭಿಕ್ಷೆಯನ್ನು ಯಾಚಿಸುತ್ತ, ಅರಮನೆಯ ದ್ವಾರದಲ್ಲಿ ನಿಂತಿದ್ದನು. ಅವನು ಎಲ್ಲ ರೀತಿಯ ಕೆಡುಕುಗಳನ್ನೂ ಸುಟ್ಟುಬೂದಿ ಮಾಡುವ ಜ್ಞಾನದ ಬೆಳಕಿನಿಂದ ಬೆಳಗುತ್ತಿದ್ದನು. ಬೋಧಿಸತ್ವನ ಪುಣ್ಯವನ್ನು ಹೆಚ್ಚಿಸಲೆಂದೇ ಬಂದ ಪುಣ್ಯಾತ್ಮನವನು. ಅಂಥ ಮಹಾತ್ಮನು ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಶಾಂತಭಾವದಿಂದ ಕಾಯುತ್ತ ನಿಂತಿದ್ದಾನೆ.

ಕೆಡುಕಿನ ಸ್ವರೂಪವೇ ಆದ ಮಾರನಿಗೆ ಇದನ್ನು ಕಂಡು ಸಹಿಸಲಾಗಲಿಲ್ಲ. ಬೋಧಿಸತ್ವನು ದಾನವನ್ನು ನೀಡಿ, ಪಡುವ ಆನಂದವನ್ನು ಅವನಿಗೆ ಅರಗಿಸಿಕೊಳ್ಳಲಾಗಲಿಲ್ಲ. ಅರಮನೆಗೂ, ಪ್ರತ್ಯೇಕಬುದ್ಧನು ನಿಂತಿದ್ದ ಸ್ಥಳಕ್ಕೂ ಇದ್ದ ಮಧ್ಯಂತರ ಸ್ಥಳದಲ್ಲಿ ಒಂದು ನರಕವನ್ನೇ ತನ್ನ ಮಾಯೆಯಿಂದ ಸೃಷ್ಟಿಸಿಬಿಟ್ಟನು. ಆ ದೃಶ್ಯವು ಭೀಕರವಾಗಿತ್ತು; ಘೋರವಾಗಿತ್ತು. ಹೃದಯವಿದ್ರಾವಕ ಶಬ್ದಗಳು ಅಲ್ಲಿಂದ ಹೊರಹೊಮ್ಮುತ್ತಿದ್ದವು. ನರಕಾಗ್ನಿಗಳು ಪ್ರಜ್ವಲಿಸುತ್ತಿದ್ದವು. ನೂರಾರು ಜನರು ಅಪಾರ ಯಾತನೆಯಿಂದ ನರಳುತ್ತಿರುವುದು ಕಂಡುಬರುತ್ತಿತ್ತು.

ಇದೇ ಸಮಯದಲ್ಲಿ ಪ್ರತ್ಯೇಕಬುದ್ಧನು ಭಿಕ್ಷೆಗಾಗಿ ತನ್ನ ಅರಮನೆಯ ದ್ವಾರದಲ್ಲಿ ಬಂದು ನಿಂತಿರುವುದನ್ನು ಬೋಧಿಸತ್ವನು ಕಂಡುಕೊಂಡನು. ಅವನಿಗೆ ಭಿಕ್ಷೆಯನ್ನು ನೀಡಲು ತನ್ನ ಪತ್ನಿಗೆ ಹೇಳಿದನು. ''ಪ್ರಿಯಳೇ, ಯಥೇಷ್ಟವಾಗಿ ಆಹಾರವನ್ನು ತೆಗೆದುಕೊಂಡು ಹೋಗಿ, ಸಾಧುಮಹಾತ್ಮನಿಗೆ ಕೊಟ್ಟು ಬಾ.''

ಅವಳು ಹಾಗೆಯೇ ಮಾಡಲು ಹೊರಟಳು. ಆದರೆ, ಮಧ್ಯದಲ್ಲಿ ಅವಳು ಕಂಡದ್ದೇನು? ನರಕ ದರ್ಶನವನ್ನು. ಇದನ್ನು ಕಂಡು, ಅವಳು ಹೌಹಾರಿದಳು. ಹಾಗೆಯೇ ಹಿಂದಿರುಗಿ ಬಂದಳು. ಅದನ್ನು ನೋಡಿ, ಬೋಧಿಸತ್ವನು ''ಏನಾಯಿತು?'' ಎಂದು ಕೇಳಿದನು. ಅವಳು ಹೇಳಿದಾಗ, ಬೋಧಿಸತ್ವನು ತಾನೇ ಅವಳು ಹೊತ್ತುಕೊಂಡಿದ್ದ ಆಹಾರವನ್ನು ತೆಗೆದುಕೊಂಡು ಹೊರಟನು. ಅವನು ದ್ವಾರದ ಬಳಿಗೆ ಬಂದಾಗ, ಅವನು ಕೂಡ ಭೀಕರ ನರಕದ ದೃಶ್ಯವನ್ನು ನೋಡಿದನು. ಇದೇನಿದು ಎಂದು ಅವನು ಯೋಚಿಸುತ್ತಿದ್ದಾಗ, ಮಾರನು ಅವನ ರೂಪವನ್ನು ತೋರಿಸಿಕೊಂಡನು. ಬೋಧಿಸತ್ವನ ಜೊತಗೆ ಮಾತನಾಡಲು ಆರಂಭಿಸಿದನು:

''ಗೃಹಸ್ಥನೇ, ಇದು ಭೀಕರ ನರಕ. ಇದರ ಹೆಸರು ಮಹಾರೌರವ. ಇದರಿಂದ ನೀನು ತಪ್ಪಿಸಿಕೊಳ್ಳಲಾರೆ. ನೀನು ಬಡವರ, ತಾಪಸಿಗಳ ಹೊಗಳಿಕೆಯನ್ನು ಆಶಿಸಿ, ನಿನ್ನ ಎಲ್ಲ ಸಂಪತ್ತೆಲ್ಲವನ್ನೂ ದಾನ ಮಾಡಲು ಬಯಸುತ್ತೀಯೆ. ನಿನಗಂತೂ, ದಾನ ಮಾಡುವುದರಲ್ಲಿ ಬಹಳ ಉತ್ಸಾಹ. ಹೀಗೆ ಮಾಡಿದರೆ, ನೀನು ಈ ರೌರವ ನರಕಕ್ಕೆ ಸಾವಿರಾರು ವರ್ಷಗಳ ಕಾಲ ಹೋಗಿ ಬೀಳುತ್ತೀಯೆ. ಅರ್ಥ ಅಥವಾ ಧನವೇ ಧರ್ಮವನ್ನು ಪರಿಪಾಲನೆ ಮಾಡುವುದಕ್ಕೆ ಮುಖ್ಯವಾದ ಕಾರಣ. ಇದನ್ನು ಕಾಪಾಡಿಕೊಳ್ಳುವುದನ್ನು ಬಿಟ್ಟು, ದಾನ ಮಾಡುತ್ತ ಹೋಗುವುದು ಬಹಳ ಪಾಪದ ಕೆಲಸ. ಇದರಿಂದ ಈಗ ನೀನು ನೋಡುತ್ತಿರುವ ಮಹಾರೌರವ ನರಕವೇ ಪ್ರಾಪ್ತಿಯಾಗುತ್ತದೆ.''

ಇದನ್ನು ಕೇಳಿದ ಬೋಧಿಸತ್ವನು ತನ್ನ ಮನಸ್ಸಿನಲ್ಲಿ ಸ್ವಲ್ಪವೂ ವಿಚಲಿತಗೊಳ್ಳಲಿಲ್ಲ. ಸೈತಾನನ ಸ್ವರೂಪದಲ್ಲಿರುವ ಮಾರನು ಇಂಥ ಪುಣ್ಯಕಾರ್ಯವನ್ನು ತಡೆಗಟ್ಟಲು ನಡೆಸುತ್ತಿರುವ ಸಂಚು ಇದು ಎಂದು ಅವನು ಚೆನ್ನಾಗಿ ತಿಳಿದುಕೊಂಡನು. ದೃಢ ನಿಶ್ಚಯದಿಂದ ಬಲವಾಗಿಯೇ ಉತ್ತರವನ್ನು ನೀಡಿದನು; ಆದರೆ ಅವನ ಮಾತುಗಳು ಮೃದುವಾಗಿದ್ದವು, ದಯಾಪೂರಿತವಾಗಿದ್ದವು: ''ಮಾರನೇ, ನೀನು ನನ್ನ ಒಳಿತಿಗಾಗಿಯೇ ಈ ಸಲಹೆಯನ್ನು ನೀಡುತ್ತಿರುವೆ, ದೇವತಾಪುರುಷರು ಈ ರೀತಿ ಒಳ್ಳೆಯ ಮಾರ್ಗವನ್ನು ತೋರಿಸುವುದರಲ್ಲಿ ಉತ್ಸುಕರಾಗಿರುತ್ತಾರೆ. ಕಾಯಿಲೆ ಬರುವ ಮೊದಲೇ ಅದಕ್ಕೆ ನಿಯಂತ್ರಣವನ್ನು ಮಾಡುವುದು ಒಳ್ಳೆಯದೇ. ಆದರೆ ಈಗ ಕಾಲ ಮಿಂಚಿ ಹೋಗಿದೆ. ದಾನನೀಡುವ ನನ್ನ ಈ ಕಾಯಿಲೆ ಬಹಳವಾಗಿ ಹರಡಿಹೋಗಿದೆ. ಇದನ್ನು ಈಗ ನಿಯಂತ್ರಣ ಮಾಡಲು ಸಾಧ್ಯವಿಲ್ಲ.

''ನೀನು ಹೇಳುತ್ತೀಯೆ, ದಾನ ಮಾಡುವುದರಿಂದ ಪಾಪ ಉಂಟಾಗುತ್ತದೆ; ಅದರಿಂದ ನರಕಯಾತನೆ ಉಂಟಾಗುವುದು ಎಂದು. ಆದರೆ ವಿನಯದಿಂದ ಕೇಳಿಕೊಳ್ಳುತ್ತೇನೆ, ನನ್ನ ಈ ಮನುಷ್ಯಬುದ್ಧಿಗೆ ತೋರಿದಂತೆ, ದಾನ ಮಾಡದೆ ಗಳಿಸಿರುವ ಹಣವು ಯಾವ ರೀತಿಯಲ್ಲಿಯೂ ಸದ್ಗುಣವನ್ನು ಉಂಟು ಮಾಡುವುದಿಲ್ಲ. ಧನಸಂಪಾದನೆ ಮಾತ್ರದಿಂದ ಒಬ್ಬನು ಒಳ್ಳೆಯ ಮನುಷ್ಯನಾಗಲು ಸಾಧ್ಯವೆ? ಈ ಹಣವು ಯಾವರೀತಿಯಲ್ಲಿ ಒಬ್ಬನಿಗೆ ಸಹಾಯ ಮಾಡುತ್ತದೆ? ಕಳ್ಳರು ತಿಜೋರಿಯಲ್ಲಿ ಕಳ್ಳತನ ಮಾಡಿದಾಗ, ಸಮುದ್ರದ ಕೆಳಗೆ ಮುಳುಗಿ ಹೋದಾಗ ಯಾವ ಹಣ ಅಲ್ಲಿ ಸಹಾಯಕ್ಕೆ ಬರುತ್ತದೆ?

''ನೀನು ಮತ್ತೂ ಹೇಳುತ್ತೀಯೆ, ದಾನ ಕೊಟ್ಟವನು ನರಕಕ್ಕೆ ಹೋಗುತ್ತಾನೆ; ದಾನವನ್ನು ಸ್ವೀಕರಿಸಿದವನು ಸ್ವರ್ಗಕ್ಕೆ ಹೋಗುತ್ತಾನೆ ಎಂದು. ಹೀಗೆ ಹೇಳುವುದರ ಮೂಲಕ ದಾನಕೊಡುವ ನನ್ನ ಬಯಕೆಯನ್ನು ನೀನು ಇನ್ನೂ ಹೆಚ್ಚಿಸಿದ್ದೀಯೆ ಎಂದೇ ಹೇಳಬೇಕು. ನೀನು ಹೇಳಿದಂತೆಯೇ ಆಗಲಿ; ನಾನು ನರಕಕ್ಕೆ ಹೋದರೂ ಪರವಾಗಿಲ್ಲ; ನನ್ನಿಂದ ದಾನ ಪಡೆದವನು ಸ್ವರ್ಗಕ್ಕೆ ಹೋಗಲಿ! ಇದನ್ನೇ ನಾನು ಪರಮ ಭಾಗ್ಯ ಎಂದು ತಿಳಿದುಕೊಳ್ಳುತ್ತೇನೆ. ನಿನ್ನ ಯಾವ ಬೆದರಿಕೆಯೂ ನನ್ನನ್ನು ಈ ಕೃತ್ಯದಿಂದ ತಡೆಯಲು ಸಾಧ್ಯವಿಲ್ಲ. ನನಗೆ ಸ್ವಂತವಾಗಿ ಸಂತೋಷ ಉಂಟಾಗಲೆಂದು ನಾನು ದಾನ ಮಾಡುತ್ತಿಲ್ಲ. ಇತರರಿಗೆ ಆನಂದ, ಸಮಾಧಾನ, ಶಾಂತಿಗಳು ಉಂಟಾಗಲೆಂದೇ ನಾನು ದಾನ ಮಾಡುವುದು. ಇದರಿಂದ ನನಗೆ ನರಕ ಪ್ರಾಪ್ತಿ

ಯಾದರೂ, ಬಹಳಷ್ಟು ದುಃಖವನ್ನು ಅನುಭವಿಸಬೇಕಾದರೂ ಪರವಾಗಿಲ್ಲ. ನಾನು ದಾನಮಾಡುವುದನ್ನು ನಿಲ್ಲಿಸುವುದಿಲ್ಲ.''

ಆಗ ಮಾರನು ಬೆದರಿಕೆಯನ್ನು ಹಾಕುವುದನ್ನು ಬಿಟ್ಟು, ಸ್ನೇಹಿತನಂತೆ ಮೃದುವಾಗಿ ಬೋಧಿಸತ್ವನಿಗೆ ಬುದ್ಧಿ ಹೇಳುತ್ತಾನೆ: ''ಅಪ್ಪಾ, ನಿನ್ನ ಒಳ್ಳೆಯದಕ್ಕೇ ಹೇಳುತ್ತಿರುವುದು. ನನ್ನನ್ನು ನಿನ್ನ ಸ್ನೇಹಿತನಂತೆ ಭಾವಿಸು. ಮುಂದೆ ನಾನು ಮಾಡಿದ ಉಪಕಾರಕ್ಕಾಗಿ ನೀನೇ ನನಗೆ ಧನ್ಯವಾದಗಳನ್ನು ಹೇಳುತ್ತೀಯೆ. ನನ್ನ ಮಾತನ್ನು ಕೇಳದೆ ಹೋದರೆ, ನಿಜವಾಗಲೂ ಪಶ್ಚಾತ್ತಾಪವನ್ನು ಪಡಬೇಕಾಗುತ್ತದೆ.''

ಇದಕ್ಕೆ ಬೋಧಿಸತ್ವನು ಹೇಳಿದನು: ''ಸ್ವಾಮಿ, ದಯವಿಟ್ಟು ಕ್ಷಮಿಸಿರಿ. ನೀನು ಸೃಷ್ಟಿಸಿರುವ ಮಹಾರೌರವ ನರಕದ ಅಗ್ನಿಯ ಜ್ವಾಲೆಗಳು ನನ್ನನ್ನು ನೂರಾರು ವರುಷಗಳ ಕಾಲ ಸುಟ್ಟು ಹಾಕಲಿ. ಆದರೆ ತಾಪಸಿಗಳನ್ನು, ಬಡವರನ್ನು ಆದರಿಂದ ಗೌರವಿಸಿ ಅವರಿಗೆ ದಾನ ನೀಡುವಾಗ ನನಗೆ ಉಂಟಾಗುವ ಸಂತೋಷವನ್ನು ನಾನು ಎಂದೆಂದಿಗೂ ಕಳೆದುಕೊಳ್ಳಲಾರೆ. ಅವರನ್ನು ತಿರಸ್ಕರಿಸಿದಾಗ ಆಗುವ ಪಾಪವನ್ನು ಎಂದಿಗೂ ನಾನು ಮಾಡಲಾರೆ.''

ಹೀಗೆ ಹೇಳುತ್ತ, ಬೋಧಿಸತ್ವನು ಕಾದುನಿಂತಿದ್ದ ಪ್ರತ್ಯೇಕ ಬುದ್ಧನಿಗೆ ದಾನ ನೀಡಲು ಮುಂದಾದನು. ಅವನ ಕುಟುಂಬದವರು ಮತ್ತು ಹೆಂಡತಿ ಅವನನ್ನು ತಡೆಯಲು ಬಹುಪ್ರಯಾಸಪಟ್ಟರು. ಇಷ್ಟಾದರೂ ಬೋಧಿಸತ್ವನ ಮನಸ್ಸಿನಲ್ಲಿ ಸ್ವಲ್ಪವೂ ಆತಂಕವುಂಟಾಗಲಿಲ್ಲ; ಕಳವಳವಾಗಲಿಲ್ಲ. ದಾನವನ್ನು ನೀಡಬೇಕು ಎನ್ನುವ ಮಹದಾಸೆ ಮಾತ್ರ ಅನುಕ್ಷಣವೂ ಹೆಚ್ಚಾಗುತ್ತಲೇ ಇತ್ತು.

ಬೋಧಿಸತ್ವನ ಈ ಮಹಾಪುಣ್ಯಕಾರ್ಯದ ಫಲವೋ ಏನೋ, ಆ ಮಹಾರೌರವ ನರಕದ ಜ್ವಾಲೆಗಳ ನಡುವೆಯೇ ಒಂದು ಶ್ವೇತವರ್ಣದ ಕಮಲಪುಷ್ಪವು ಅರಳಿತು. ಅದು ಮಾರನನ್ನು ಅಪಹಾಸ್ಯ ಮಾಡುವಂತೆ ಇತ್ತು. ಈ ಕಮಲಪುಷ್ಪದ ಸಹಾಯದಿಂದ ಬೋಧಿಸತ್ವನು ಮಾರನು ಸೃಷ್ಟಿಸಿದ ಮಹಾರೌರವ ನರಕವನ್ನೂ ದಾಟಿಹೋದನು. ಅವನ ಕೈಯಲ್ಲಿ ಭಿಕ್ಷೆಗೆ ನೀಡಬೇಕಾದ ಆಹಾರ ಪದಾರ್ಥಗಳ ಕರಂಡಿಕೆಯು ಇತ್ತು. ಹಾಗೂ ಅವನ ಹೃದಯವು ಹರ್ಷ ಮತ್ತು ಆನಂದಗಳಿಂದ ಉಬ್ಬಿಹೋಗಿತ್ತು.

ಭಿಕ್ಷೆಯನ್ನು ಸ್ವೀಕರಿಸಿದ ಪವಿತ್ರಾತ್ಮನಾದ ಆ ಸಂನ್ಯಾಸಿಯು ತನ್ನ ತೃಪ್ತಿಯನ್ನು ತೋರಿಸಲೆಂದೋ ಏನೋ, ಗಗನವನ್ನು ಏರಿದನು. ಅಲ್ಲಿ ತನ್ನ ಮಹಾನ್ ವೈಭವವನ್ನು ಪ್ರದರ್ಶಿಸಿದನು. ಆ ರೌರವ ನರಕದ ಜ್ವಾಲೆಗಳ ಮೇಲೆ ತಂಪು ನೀರಿನ ಮಳೆಗರೆದನು. ನರಕದ ಕಾರ್ಮೋಡಗಳ ನಡುವೆ ಬೆಳಗುವ ಮಿಂಚಿನಂತೆ ಪ್ರಜ್ವಲಿಸಿದನು.

ಇತ್ತ ಮಾರನು ತನ್ನ ಉಪಾಯವು ಫಲಿಸದೆ ಹೋದದ್ದನ್ನು ಕಂಡು ನಿರಾಶನಾದನು. ಅವನು ಕುಂದಿದ ಮನಸ್ಸುಳ್ಳವನಾದನು. ಅವನ ಉತ್ಸಾಹವೆಲ್ಲ ಕಡಮೆಯಾಯಿತು. ಬೋಧಿಸತ್ವನ ಮುಂದೆ ಅವನಿಗೆ ಮುಖ ತೋರಿಸಲು ನಾಚಿಕೆಯಾಯಿತು. ಅವನು ನರಕಜ್ವಾಲೆಗಳಲ್ಲಿ ಕರಗಿಹೋದನು.

ಈ ಗಾಥೆಯ ರಹಸ್ಯವೇನು? ಅನುಕೂಲ ಪರಿಸ್ಥಿತಿಯಲ್ಲಿ ಎಲ್ಲರೂ ದಾನಧರ್ಮಾದಿಗಳನ್ನು ಮಾಡುತ್ತಾರೆ. ಆದರೆ ಅತ್ಯಂತ ಸಂಕಷ್ಟವು ಎದುರಾಗುವುದನ್ನು ತಿಳಿದೂ ಯಾರು ಪುಣ್ಯಕರ್ಮಗಳಲ್ಲಿ ತೊಡಗುತ್ತಾರೋ, ಅವರೇ ಶ್ರೇಷ್ಠರು; ಅವರೇ ಮಹಾತ್ಮರು; ಬುದ್ಧನಾಗಲು ಅರ್ಹತೆ ಉಳ್ಳವರು. ❖

## ಶ್ರೀಮಾತೆಯವರ ಉಪದೇಶಗಳು



ಶಿಷ್ಯ : ಅಮ್ಮಾ, ಹೇಳಿ, — ಕಾಶಿಯಲ್ಲಿ ಸತ್ತರೆ ಮುಕ್ತಿ ದೊರಕುವುದಿಲ್ಲವೆ? ನೀವು ಏನು ದರ್ಶನ ಪಡೆದಿರಿ?

ಶ್ರೀಮಾತೆ : ಶಾಸ್ತ್ರಗಳಲ್ಲಿ ಹಾಗೆ ಹೇಳಿದೆ, ಅದಲ್ಲದೆ ಹಾಗೆಂದು ನಂಬಿ ಇಷ್ಟೊಂದು ಜನ ಇಲ್ಲಿಗೆ ಬರುತ್ತಿದ್ದಾರೆ. ಆದ್ದರಿಂದ ಮುಕ್ತಿ ಸಿಗುವುದು. ಭಗವಂತನಲ್ಲಿ ಶರಣಾದವನಿಗೆ ಮುಕ್ತಿ ಲಭಿಸದೆ ಇನ್ನೇನಾದೀತು?

ಶಿಷ್ಯ : ಯಾರು ಶರಣಾಗತರಾಗುವರೋ ಅವರಿಗಂತೂ ಮುಕ್ತಿ ಲಭಿಸುವುದು ನಿಜ. ಯಾರು ಶರಣಾಗತರಲ್ಲವೋ, ಭಕ್ತರಲ್ಲವೋ, ವಿಧರ್ಮಿಗಳೋ — ಅವರಿಗೆ ಕಾಶಿಯಲ್ಲಿ ಮುಕ್ತಿ ಲಭಿಸದೆ?

ಶ್ರೀಮಾತೆ : ಅವರಿಗೂ ಲಭಿಸುವುದು. ಕಾಶಿ ಚೈತನ್ಯಮಯವಾದ ಸ್ಥಳ. ಇಲ್ಲಿ ಎಲ್ಲ ಜೀವಿಗಳೂ ಚೈತನ್ಯ ಮಯ. ಕೀಟದಿಂದ ಹಿಡಿದು ಜೇಡನವರೆಗೂ ಎಲ್ಲವೂ ಚೈತನ್ಯಮಯ. ಭಕ್ತ, ಭಕ್ತನಲ್ಲದವ, ವಿಧರ್ಮಿಯಾಗಲಿ, ಕೀಟ–ಪತಂಗಗಳಾಗಿರಲಿ; ಅವರು ಯಾರೇ ಸಾಯಲಿ, ಎಲ್ಲರಿಗೂ ಮುಕ್ತಿ ಲಭಿಸುವುದು.

ಶಿಷ್ಯ : ಈ ನೊಣಕ್ಕೆ ಕೂಡಾ?

ಶ್ರೀಮಾತೆ : ಹೌದು, ನೊಣಕ್ಕೂ ಮುಕ್ತಿ ಲಭಿಸುವುದು. ಇಲ್ಲಿನ ಎಲ್ಲ ಜೀವಿಗಳೂ ಚೈತನ್ಯಮಯ.

'ಶ್ರೀಶಾರದಾದೇವಿ ವಚನವೇದ' ದಿಂದ, ಪು.೨೬೧